# 6

# “ನಾನು ಆಗಿದ್ದೇನೆ” ಎಂಬ ಹೇಳಿಕೆಗಳು ಭೂಲೋಕದ ಮೇಲೆ ಕುಮಾರನ ದೈವತ್ವವನ್ನು ಪ್ರತಿಬಿಂಬಿಸುತ್ತವೆ

ಯೇಸುವಿನ ಜೀವನ ಹಾಗೂ ಹಕ್ಕು ಬಾಧ್ಯತೆಗಳ ಹಲವಾರು ವಿಷಯಗಳು ಆತನ ಕಾಲದ ಐತಿಹಾಸಿಕ ಹಿನ್ನೆಲೆ ಮತ್ತು ಧಾರ್ಮಿಕ ವಾತಾವರಣದ ಹಿನ್ನೆಲೆಯಲ್ಲಿ ಚೆನ್ನಾಗಿ ಅರ್ಥವಾಗುತ್ತವೆ. ಹಾಗಿದ್ದರೂ, ಯೇಸುವಿನ ಸಾರ್ವತ್ರಿಕತೆಯ ಹಾಗೂ ಆತನ ಸೇವೆಯ ಮಹತ್ವವು ಸ್ಥಳ, ಸಮಯ, ಸಂಸ್ಕೃತಿ, ಧಾರ್ಮಿಕ ವಿಚಾರ ಇಲ್ಲವೇ ಇತಿಹಾಸದ ಸಾಮಾನ್ಯ ಸಾಧನೆಗಳಿಗೆ ಮಿತಿಗೊಳಿಸಲ್ಪಡಲಾರದು ಅಥವಾ ಅಳೆಯಲ್ಪಡಲಾರದು. ಈ ಕ್ಷೇತ್ರಗಳನ್ನು ಆತನು ದಾಟಿಹೋಗುತ್ತಾನೆ. ಅವುಗಳಲ್ಲಿ ಪ್ರತಿಯೊಂದಕ್ಕೆ ಯೋಗ್ಯ ಅರ್ಥ ಕೊಡುತ್ತಾನೆ. ಆತನು ಕುಮಾರನಾದ ದೇವರು ಆಗಿರುವದರಿಂದ ಅವುಗಳನ್ನು ದಾಟಿಹೋಗುತ್ತಾನೆ. ಅವುಗಳೊಂದಿಗೆ ದೇವ-ಮಾನವನಂತೆ ಜೀವಿಸುವದರಿಂದ ಆತನು ಅವುಗಳಿಗೆ ಅರ್ಥ ಕೊಟ್ಟಿದ್ದಾನೆ. ಆತನ ದೇವತ್ವ ಮತ್ತು ಆತನ ಮಾನವತ್ವವು ನಮ್ಮ ಅಸ್ತಿತ್ವಕ್ಕೆ ಅನಿವಾರ್ಯವಾದದ್ದಾಗಿದೆ. *ಆತನ ದೇವತ್ವವಿಲ್ಲದೇ ನಾವು ಸೃಷ್ಟಿಸಲ್ಪಡುತ್ತಿರಲಿಲ್ಲ. ಆತನ ಮಾನವತ್ವವಿಲ್ಲದೇ ನಾವು ರಕ್ಷಿಸಲ್ಪಡುತ್ತಿರಲಿಲ್ಲ.*

ಯೇಸುವು ತಾನು ದೇವರಾಗಿದ್ದಾನೆಂದು ನೇರವಾಗಿ ಬೋಧಿಸಿದ್ದು ಆಶ್ಚರ್ಯಕರ ವಾದದ್ದಾಗಿರುವದಿಲ್ಲ. ಹೊಸ ಒಡಂಬಡಿಕೆಯ ಬರಹಗಾರರು ಆತನ ದೈವತ್ವವನ್ನು ಒತ್ತಿ ಹೇಳಿದ್ದೂ ಸಹ ಆಶ್ಚರ್ಯಕರವಾದದ್ದಾಗಿರುವದಿಲ್ಲ. ಆತನ ಜೀವನ ಮತ್ತು ಬೋಧನೆಯ ಅಸ್ತಿವಾರದಂತೆ ಈ ಅಂತಿಮ ಸತ್ಯವು ಇಲ್ಲದಿದ್ದರೆ ಯೇಸುವು ದೊಡ್ಡ ತತ್ವಜ್ಞಾನಿಗಿಂತ, ನೀತಿ ಬೋಧಕನಿಗಿಂತ ಇಲ್ಲವೇ ಬೋಧಕನಿಗಿಂತ ಹೆಚ್ಚಿನವನಾಗಿರುತ್ತಿರಲಿಲ್ಲ; ಪಾಪದ ಮತ್ತು ಮರಣದ ಬಂಧನಗಳಿಂದ ತಪ್ಪಿಸಿಕೊಳ್ಳುವ ನಮ್ಮ ನಿರೀಕ್ಷೆಯು ವ್ಯರ್ಥವಾದದ್ದೂ ನೆಲೆಯಿಲ್ಲದ್ದೂ ಆಗಿರುವುದು. ವಿಷಯವನ್ನು ಯಥಾರ್ಥವಾಗಿ ಎದುರಿಸೋಣ: ಯೇಸುವು ದೇವರಾಗಿದ್ದನು ಇಲ್ಲವೇ ಆತನು ಕ್ರೂರ ವಂಚಕನಾಗಿದ್ದನು. ಈ ಪ್ರಶ್ನೆಯ ಬಗ್ಗೆ, ಆತನು ಖಂಡಿತವಾಗಿ ಏನು ಹೇಳುತ್ತಾನೆ?

## ದೃಢೀಕರಿಸಲ್ಪಟ್ಟ ಆತನ ದೈವತ್ವ

ಆತನನ್ನು ದೇವರಂತೆ, ಅವಶ್ಯಕವಾಗಿ ಯೋಚಿಸದಿದ್ದ ಅನೇಕರಿಂದ ಯೇಸುವು “ದೇವರ ಕುಮಾರನು” ಎಂದು ಕರೆಯಲ್ಪಟ್ಟನು. “ಮೆಸ್ಸೀಯ” ಎಂಬ ಮಾತು ತನ್ನಲ್ಲಿಯೇ ದೈವತ್ವವನ್ನು ಸೂಚಿಸುವದಿಲ್ಲ ಎಂಬುದನ್ನು ನೋಡಿದ್ದೇವೆ ದೈವಿಕ ಜೀವಿಯಂತೆ ತನ್ನಲ್ಲಿ ನಂಬಿಕೆಯಿಡಬೇಕೆಂದು ಆತನ ಅದ್ಭುತಕಾರ್ಯಗಳು ಯಾರಿಗೂ ಒತ್ತಾಯ ಪಡಿಸಲಿಲ್ಲವೆಂದೂ ನೋಡಿದ್ದೇವೆ. “ಮನುಷ್ಯ ಕುಮಾರನು” ಎಂದು

ತನ್ನನ್ನು ಸತತವಾಗಿ ವಿವರಿಸಿದ್ದು *ಆತನ ದೈವತ್ವವನ್ನು ಒಪ್ಪಿಕೊಳ್ಳುವ* ಮಾರ್ಗದಂತೆ ಹೆಚ್ಚಾದವರು ಅರ್ಥಮಾಡಿಕೊಳ್ಳಲಿಲ್ಲ. ದೇವರಾಗಿದ್ದೇನೆ ಎಂಬ ಯೇಸುವಿನ ನಿರ್ದಿಷ್ಟ ಹೇಳಿಕೆಯನ್ನು ನಾವು ಪರೀಕ್ಷಿಸಿರುವದಿಲ್ಲ. ಈಗ ನಾವು ಅದನ್ನು ಮಾಡುತ್ತೇವೆ.

ಯೇಸುವು ಯೆಹೂದ್ಯನಾಗಿದ್ದನು. ಆತನ ನಿಲುವು, ಕಲಿಯುವಿಕೆ, ಜೀವನ ಹಾಗೂ ಚಟುವಟಿಕೆಗಳು ಸನ್ಹೆದ್ರಿನ್‌ದ ರಬ್ಬಿ ನಿಕೊದೇಮನು ಯೇಸುವನ್ನು "ರಬ್ಬಿಯೇ, ನೀನು ದೇವರಿಂದ ಬಂದ ಬೋಧಕನು ಎಂದು ನಾವು ತಿಳಿದಿದ್ದೇವೆ" ಎಂದು ಹೇಳಿ ಕರೆಯುವಂತೆ ಮಾಡಿತು (ಯೋಹಾನ 3:2ಎ). ಯೇಸುವು ತೋರಾವನ್ನು (Torah) ತಿಳಿದಿದ್ದನು. ಆತನು ತೋರಾದ ಪವಿತ್ರ ಬರಹಗಳನ್ನು ತಿಳಿದಿರುವನೆಂದು ತೋರಾದ ಬೋಧಕರು ಅರಿತುಕೊಂಡಿದ್ದರು. ಆದುದರಿಂದ, ಯೇಸು ಪರಿಶುದ್ಧ ಬರಹಗಳನ್ನು ತನ್ನ ದೈವತ್ವಕ್ಕೆ ಸಾಕ್ಷಿಯಂತೆ ಉಪಯೋಗಿಸಿದಾಗ ಆತನು ಹೇಳಿದ ಅಂಶವನ್ನು ತಪ್ಪಿಸಿಕೊಳ್ಳಲಿಲ್ಲ. ಆತನು ಗಂಭೀರನಾಗಿದ್ದಾನೆ ಎಂದು ಅವರು ತಿಳಿದದ್ದರಿಂದ ಆಶ್ಚರ್ಯ ಚಕಿತರಾದರು. ಆತನು ದೇವರಾಗಿದ್ದಾನೆಂದು ಹೇಳುತ್ತಿದ್ದನು ಎಂದು ಅವರು ತಿಳಿದಿದ್ದರು.

ಮೋಶೆಗೆ ಪ್ರಕಟಿಸಲ್ಪಟ್ಟ ದೇವರ ಹೆಸರನ್ನು[1] ಅವರು ಉಚ್ಚರಿಸದಂತೆ ಯೆಹೂದ್ಯರು ಭಕ್ತಿಭಾವದಿಂದ ಇಟ್ಟರು. ಇದಕ್ಕಾಗಿ ಪತ್ಯದ ಪುರಾವೆಯು ಸುಮಾರು ಕ್ರಿ.ಪೂ. 100 ಸುಮಾರಿಗೆ ಮೃತ್ಯು ಸಮುದ್ರದ ಸುರುಳಿಗಳಿದ್ದ ಹಿಂದಕ್ಕೆ ಹೋಗುತ್ತದೆ. ಯೆಶಾಯನ ಮೃತ್ಯ ಸಮುದ್ರದ ಸುರುಳಿಯು *'adonay* (Lord) ಪದವನ್ನು *Yahweh* (God)[2] ಪದಕ್ಕೆ ಬದಲಾಗಿ ಶಾಸ್ತ್ರಿಗಳು ಬರೆದರು ಎಂದು ತೋರುತ್ತದೆ. ಆ ರೀತಿಯಲ್ಲಿ ವಾಚಕರು ಹೇಳಬಾರದಂಥ ಹೆಸರಿನ ಬದಲು "ಕರ್ತನು" ಎಂದು ಹೇಳಲಿಕ್ಕೆ ಜ್ಞಾಪಿಸಲ್ಪಟ್ಟಿದ್ದಾರೆ. ಮೋಶೆಗೆ ಪ್ರಕಟಿಸಲ್ಪಟ್ಟ ದೇವರ ಹೆಸರು *yahweh* ಎಂದಿತ್ತು. "to be" ಎಂಬ ಕ್ರಿಯಾಪದ ರೂಪವಾಗಿತ್ತು. ಬೇರೆ ಮಾತುಗಳಲ್ಲಿ, ದೇವರು ಮೋಶೆಗೆ ತನ್ನನ್ನು "I am" ಇಲ್ಲವೇ "I will be" (What I will) ಅಸ್ತಿತ್ವದಲ್ಲಿರುವಾತನು ಎಂದು ಪ್ರಕಟಿಸಿದನು.

ಯೇಸುವು ಈ ಹೆಸರನ್ನು ತನಗೆ ಅನ್ವಯಿಸಿಕೊಂಡಾಗ ಯೆಹೂದ್ಯರ ಮಧ್ಯದಲ್ಲಿ ಎಬ್ಬಿಸಲ್ಪಟ್ಟ ಕೋಪವನ್ನು ನಾವು ವಿರಳವಾಗಿ ಅರ್ಥಮಾಡಿಕೊಳ್ಳುತ್ತೇವೆ. "ಯೇಸು *'ನಿಮಗೆ ನಿಜವಾಗಿ ಹೇಳುತ್ತೇನೆ, ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ* ಅಂದನು.' ಅವರು ಈ ಮಾತನ್ನು ಕೇಳಿ ಆತನನ್ನು ಕೊಲ್ಲುವದಕ್ಕಾಗಿ ಕಲ್ಲು ತೆಗೆದು ಕೊಂಡರು ..." (ಯೋಹಾನ 8:58, 59ಎ). ಇದು ಅಂತಿಮ ಪ್ರಕಟನೆಯಾಗಿತ್ತು. ಇದಕ್ಕಿಂತ ಹೆಚ್ಚಿನ ಹಕ್ಕು ಸಾಧಿಸಲಿಕ್ಕಾಗಲಿಲ್ಲ.

*Ego eimi* ("I am") ಎಂಬುದು ಗ್ರೀಕ ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸಲ್ಪಟ್ಟಂತೆ ದೇವರಿಗೆ ಉಲ್ಲೇಖವಷ್ಟೇ ಆಗಿರದೇ, ಹಿಬ್ರುವಿನಲ್ಲಿ *'ani 'anihu* ("I am He") ಎಂದು ಖಂಡಿತವಾದ ರೀತಿಯಲ್ಲಿ ತನ್ನ ಬಗ್ಗೆ ದೇವರು ಮಾತಾಡಿದ್ದರ ಭಾಷಾಂತರವಾಗಿದೆ (ಧರ್ಮೋಪದೇಶಕಾಂಡ 32:39). ಯಾವುದೇ ಹೇಳಿಕೆಯು ಖಂಡಿತವಾಗಿರುವದಕ್ಕಿಂತ ಬೇರೆಯಾದದ್ದು ಆಗಿರುವದಿಲ್ಲ ಎಂದು ಯೋಚಿಸ ಬೇಕಾಗುವುದು. NIVಯ "ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ" ಎಂಬ ಮಾತು ಮೂಲದಲ್ಲಿ "Amen, amen" ಎಂಬುದು ಸಾಂಪ್ರದಾಯಕವಾಗಿ "verily, verily" (KJV), "truly, truly" (RSV), ಇತ್ಯಾದಿಯಾಗಿ ಭಾಷಾಂತರಿಸಲ್ಪಟ್ಟಿದೆ.[3]

ಹಾಗಿದ್ದರೂ ಯೆಹೂದ್ಯರು ಆತನನ್ನು ನಂಬಲಿಲ್ಲ. ಆತನ ಹೇಳಿಕೆಯನ್ನು ದೇವದೂಷಣೆ ಎಂದು ಯೋಚಿಸಿದರು. ದೇವದೂಷಣೆಯು ಮರಣದಂಡನೆಗೆ ಅರ್ಹವಾದ ಅಪರಾಧವಾಗಿದ್ದು, ಕಲ್ಲೆಸೆಯುವದರಿಂದ ಶಿಕ್ಷಿಸಲ್ಪಡಬೇಕಾದದ್ದು

ಆಗಿದ್ದರಿಂದ (ಯಾಜಕಕಾಂಡ 24:16) ಅವರು ರೋಮನ್ ಕಾನೂನಿನ ಅಡಿಯಲ್ಲಿ ಅವರಿಗೆ ದಂಡಿಸಲು ಅಪ್ಪಣೆಯಿಲ್ಲದಾಗ ಗುಂಪು ಕಾರ್ಯದಿಂದ ಅದನ್ನು ಸಾಧಿಸಲು ಪ್ರಯತ್ನಿಸಿದರು (ಯೋಹಾನ 18:31).

ಎಲ್ಲವನ್ನೂ ಯೋಚಿಸಿದಾಗ, "I am" ಸೂತ್ರದ ಬಗ್ಗೆ ಈ ಕೆಳಗಿನಂತೆ ಮಾತಾಡುವುದು ಯೋಗ್ಯವಾಗಿ ಕಂಡು ಬರುತ್ತದೆ: "ಅದು ತನ್ನ ಬಗ್ಗೆ ಯೇಸುವಿನ ಅತೀ ಧೈರ್ಯದ ಘೋಷಣೆಯಾಗಿದೆ. "I am." ಇದರ ಅರ್ಥ: *ನಾನಿರುವಲ್ಲಿ ದೇವರು ಅಲ್ಲಿದ್ದಾನೆ, ಅಲ್ಲಿ ದೇವರು ವಾಸಿಸುತ್ತಾನೆ, ಮಾತಾಡುತ್ತಾನೆ, ಕರೆಯುತ್ತಾನೆ, ಕೇಳುತ್ತಾನೆ, ಕಾರ್ಯಮಾಡುತ್ತಾನೆ, ತೀರ್ಮಾನಿಸುತ್ತಾನೆ, ಪ್ರೀತಿಸುತ್ತಾನೆ ...* ಇದಕ್ಕಿಂತ ಹೆಚ್ಚು ಧೈರ್ಯವುಳ್ಳದ್ದನ್ನು ಹೇಳಲಿಕ್ಕಾಗುವದಿಲ್ಲ ಇಲ್ಲವೇ ಕಲ್ಪಿಸಲಿಕ್ಕಾಗುವದಿಲ್ಲ."[4]

ಈ ಗಂಭೀರವಾದ ಹೇಳಿಕೆಯು ಪ್ರಾಥಮಿಕವಾಗಿ ಒಂದು ಅರಿಕೆಯಾಗಿರಲಿಲ್ಲ. ಇದು ಅದಕ್ಕಿಂತ ಎಷ್ಟೋ ಹೆಚ್ಚಾದದ್ದಾಗಿದೆ. ಇದು ಬೆರಗುಗೊಳಿಸುವ ಘೋಷಣೆಯಾಗಿದೆ. ಇದು ದೇವರದೇ ಭಾಷೆಯಾಗಿದೆ (ಉದಾ. ಯೆಶಾಯ 41:4). ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಯೇಸುವಿನ ಜೀವನದಲ್ಲಿ ಅನೇಕ ಹೇಳಿಕೆಗಳು ವಿಶೇಷ ಮಹತ್ವದೊಂದಿಗೆ ಮುಂದಿಡಲ್ಪಟ್ಟಿವೆ. ಕೆಲವು ಉದಾಹರಣೆಗಳನ್ನು ನೋಡಿರಿ: "ನಾನು ಜೀವದ ರೊಟ್ಟಿ," "ನಾನು ಲೋಕಕ್ಕೆ ಬೆಳಕಾಗಿದ್ದೇನೆ," "ನಾನೇ ಕುರಿಗಳಿಗೆ ಬಾಗಿಲಾಗಿದ್ದೇನೆ," "ನಾನೇ ಒಳ್ಳೇ ಕುರುಬನು," "ನಾನೇ ಪುನರುತ್ಥಾನವು," "ನಾನೇ ಜೀವವು," "ನಾನೇ ಮಾರ್ಗವು," "ನಾನೇ ಸತ್ಯವು," "ನಾನೇ ನಿಜವಾದ ದ್ರಾಕ್ಷೆ ಬಳ್ಳಿ" (ಯೋಹಾನ 6:35; 8:12; 10:7, 11; 11:25; 14:6; 15:1). ಒಬ್ಬನು ತನ್ನ ಬಗ್ಗೆ ಅಂಥ ಹೇಳಿಕೆಗಳನ್ನು ಹೇಗೆ ಮಾಡಬಹುದು? ಯೇಸುವು ಮತಭ್ರಾಂತನು, ಹುಚ್ಚನು ಇಲ್ಲವೇ ದೇವರು ಆಗಿರಬೇಕೆಂದು ಯಾರೋ ಹೇಳಿದ್ದಾರೆ. ಈ ವಿವರವನ್ನು ಓದುವ ಯಾವನೇ ಆಗಲಿ ಅವುಗಳನ್ನು ನಂಬುತ್ತಾನೆ ಮತ್ತು ಯೇಸುವು ಮತಿ ಭ್ರಾಂತನು ಇಲ್ಲವೇ ಹುಚ್ಚನು ಯೇಸುವಿನ ಬಗ್ಗೆ ಹೇಳುವದಕ್ಕಿಂತ ತನ್ನ ಬಗ್ಗೆ ಹೆಚ್ಚು ಹೇಳುವನು ಎಂದು ಒತ್ತಿ ಹೇಳುತ್ತಾನೆ.

## ಸ್ಥಿರಗೊಳಿಸಲ್ಪಟ್ಟ ಆತನ ದೈವತ್ವ

ಯೇಸುವು "ನಾನೇ ಅವನು" ಎಂದು ಹೇಳಿದಾಗ ಇತರರು ಅಸಾಮಾನ್ಯವಾದ ರೀತಿಯಲ್ಲಿ ವರ್ತಿಸುವದನ್ನು ಆತನ ಜೀವನದಲ್ಲಿಯ ಒಂದು ಘಟನೆಯು ತೋರಿಸುತ್ತದೆ: ಯೇಸುವನ್ನು ಹಿಡಿದುಕೊಟ್ಟ ಯೂದನು ಸೈನ್ಯದ ದಳವನ್ನೂ ಯೆಹೂದಿ ಧಾರ್ಮಿಕ ನಾಯಕರನ್ನೂ ಯೇಸುವನ್ನು ಹುಡುಕುತ್ತಿದ್ದಾಗ ಗೆತ್ಸೆಮನೆ ತೋಟದೊಳಗೆ ಕರೆದುಕೊಂಡು ಬಂದನು. ಆತನ ಶಿಷ್ಯರೊಂದಿಗೆ ಆತನನ್ನು ಅವರು ಕಂಡುಕೊಂಡರು. ನೀವು ಯಾರನ್ನು ಹುಡುಕುತ್ತೀರಿ? ಎಂದು ಯೇಸು ಅವರನ್ನು ಕೇಳಿದನು (ಯೋಹಾನ 18:4). "ನಜರೇತಿನ ಯೇಸುವನ್ನು" ಎಂದು ಅವರು ಹೇಳಿದಾಗ, ಯೇಸುವು "ನಾನೇ ಅವನು" *(Ego eimi)* ಎಂದು ಉತ್ತರಕೊಟ್ಟನು. ("I am" ಎಂಬುದು ಹೆಚ್ಚಾದ ಭಾಷಾಂತರಗಳಲ್ಲಿ "I am He" "ನಾನೇ ಅವನು" ಎಂದು ಭಾಷಾಂತರಿಸಲ್ಪಟ್ಟಿದೆ) ಹೀಗೆ ಹೇಳುತ್ತಿರುವದನ್ನು ತಾನು ಒಬ್ಬ ಅಲೆದಾಡುವ ಧಾರ್ಮಿಕ ರಬ್ಬಿಯಾಗಿರುವನೆಂದು ಆಯುಧಧಾರಿಗಳಾದ ಸಿಪಾಯಿಗಳೂ ಧಾರ್ಮಿಕ ನಾಯಕರುಗಳೂ ತಿಳಿದುಕೊಂಡರೋ? *ಹಾಗಿದ್ದರೆ, ಅವರು ಹಿಂಜರಿದು ನೆಲದ ಮೇಲೆ ಯಾಕೆ ಬಿದ್ದರು?* (ಯೋಹಾನ 18:2-8). ಯೆರೂಸಲೇಮಿನಲ್ಲಿ ಧಾರ್ಮಿಕ

ಸಂಸ್ಥೆಯಿಂದ ತಿರಸ್ಕರಿಸಲ್ಪಟ್ಟ, ಗೇಲಿ ಮಾಡಲ್ಪಟ್ಟ ಅನಿಷ್ಠ ಸ್ಥಳದಿಂದ ಬಂದ ಈ ಸಂಪ್ರಾದಾಯ ರಹಿತ ರಬ್ಬಿಯಲ್ಲಿ ಯಾವುದೋ ಭಯಾನಕವಾದ, ಅಶುಭವಾದ ಸಂಗತಿಯನ್ನು ಅವರು ನೋಡಿದರೋ? ಇಲ್ಲದಂತೆಯೇ! ಅವರು ನೋಡಿದ್ದು ಪ್ರಭಾವವುಳ್ಳ ವ್ಯಕ್ತಿಯನ್ನು ಹಾಗೂ ಅವರು ಕೇಳಿದ್ದು ದೈವಿಕ ಭಾಷೆಯನ್ನು - "ನಾನೇ ಅವನು." ಇದನ್ನು ಆತನು ಎರಡು ಸಲ ಹೇಳಿದನು. "ಆತನು" ಎಂಬ ಸರ್ವನಾಮವು ಭಾಷಾಂತರಕಾರದಿಂದ ಒದಗಿಸಲ್ಪಟ್ಟಿದೆ. ಇದು ಗ್ರೀಕ ಮೂಲ ಪಾಠದಲ್ಲಿ ಇರುವದಿಲ್ಲ. ಬೈಬಲುಗಳ ಉಲ್ಲೇಖವು ಓರೆ ಅಕ್ಷರಗಳಲ್ಲಿ ಬರೆಯಲ್ಪಟ್ಟಿದ್ದು ಮೂಲಪಾಠಗಳಿಗೆ ಕೂಡಿಸಿದ ಪದಗಳನ್ನು ಇದು ತೋರಿಸುತ್ತದೆ. ಭಾಷ್ಯವುಳ್ಳ ಹೆಚ್ಚಾದ ಬೈಬಲುಗಳಲ್ಲಿಯ ಟಿಪ್ಪಣೆಗಳು ಮೂಲದಲ್ಲಿ "ಆತನು" ಎಂಬುದನ್ನು ಇಲ್ಲದ್ದನ್ನು ಸೂಚಿಸುತ್ತವೆ.

ಮೊದಲಿನ ಸಂದರ್ಭಗಳಲ್ಲಿ ತನ್ನ ಯೆಹೂದಿ ಶ್ರೋತೃಗಳಿಗೆ ಪರಲೋಕದ ತನ್ನ ತಂದೆಯೊಂದಿಗಿರುವ ಅದ್ವಿತೀಯ ಸಂಬಂಧದ ಬಗ್ಗೆ ವಿವರಿಸಿದ್ದನು. ಅವರು ಕೆಳಗಿನಿಂದ ಬಂದವರು, ತಾನು ಮೇಲಿನಿಂದ ಬಂದವನು ಎಂಬುದನ್ನು ಅವಧರಿಸಿ ಹೇಳಿದನು. ಅವರು ತಮ್ಮ ಪಾಪಗಳ ನಿಮಿತ್ತವಾಗಿ ತಾನು ಹೋಗುವಲ್ಲಿಗೆ ಹೋಗಲಾರರು ಎಂದು ಯೇಸು ಹೇಳಿದ್ದನು. "ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ"[5] ಎಂದು ಹೇಳಿ ಅವರಿಗೆ ಪರಿಹಾರ ಕೊಟ್ಟಿದ್ದನು. ಯೇಸು ಇದನ್ನು ಅವರ ಮುಂದೆ ಸ್ಪಷ್ಟವಾಗಿ ಇಟ್ಟನು. "I am"ದ ಪ್ರಶ್ನೆಯು ಕೇವಲ ಆಸಕ್ತಿಯುಳ್ಳ ದೈವಜ್ಞಾನ ಶಾಸ್ತ್ರದ ಬದಿಯ ವಿಷಯವಾಗಿರಲಿಲ್ಲ.

ಎರಡೂ ಇಂದು ಇರಲಾರದು. ಯೇಸುವು "I am" ಆಗಿದ್ದಾನೆ. ಆತನ ತಂದೆಯು "I am" ಆಗಿದ್ದಾನೆ. ಇದು ದೈವತ್ವದ ಭಾಷೆಯಾಗಿದೆ. ಯೇಸುವಿನ ದೈವತ್ವದಲ್ಲಿ ಕೊರತೆಯುಳ್ಳ ಯೇಸುವಿನ ಯಾವುದೇ ಅರಿಕೆಯು ಆತನಿಗೂ ಆತನ ಪಾರಲೌಕಿಕ ತಂದೆಗೂ ಬಾಗಿಲನ್ನು ಮುಚ್ಚುತ್ತದೆ.

ದೇವರಂತೆ ಯೇಸುವು ಮೆಸ್ಸೀಯನಂತೆ ತನ್ನನ್ನು ಗುರುತಿಸಿಕೊಂಡನು. ದೇವರಂತೆ ಯೇಸುವು ಯೆಹೂದ್ಯರ ಅರಸನಂತೆ ತನ್ನನ್ನು ಗುರಿತಿಸಿಕೊಂಡನು. ದೇವರಂತೆ ಯೇಸುವು ತನ್ನನ್ನು ಮನುಷ್ಯಕುಮಾರನಂತೆ ಗುರುತಿಸಿಕೊಂಡನು. ದೇವರಂತೆ ಯೇಸುವು ಪಾಪಿಗಳನ್ನು ಹುಡುಕಿ ರಕ್ಷಿಸುವದಕ್ಕಾಗಿ ಲೋಕದೊಳಗೆ ಬಂದನು. ಯೇಸುವು ನಿಜವಾಗಿಯೂ ಕುಮಾರನಾದ ದೇವರಾಗಿದ್ದನು.

ಆತನು ಶರೀರದ ಪರದೆಯೊಳಗಿದ್ದಾಗ ಈ ಗುರಿತಿಸುವಿಕೆಗಳು ಮಾಡಲ್ಪಟ್ಟವು, ಅವೆಲ್ಲವುಗಳು ದೇವರ ಜ್ಞಾನದ, ಬಲದ, ಮಹಿಮೆಯ, ಪ್ರೀತಿಯ ಹಾಗೂ ಕೃಪೆಯ ಪ್ರದರ್ಶನಗಳಾಗಿದ್ದವು. *ಈ ಎಲ್ಲಾ ಗುರುತಿಸಿಕೊಳ್ಳುವಿಕೆಗಳು ಆತನ ಪುನರುತ್ಥಾನದಿಂದ ಪ್ರಮಾಣೀಕರಿಸಲ್ಪಟ್ಟವು ಮತ್ತು ಅಧಿಕೃತಗೊಳಿಸಲ್ಪಟ್ಟವು.* ಈ ಶರೀರಿಕ ಪರದೆಯು ಪ್ರೀತಿಯುಳ್ಳ ಹಾಗೂ ಕೃಪಾಪೂರ್ಣವಾದ ದೇವರನ್ನು ಮರೆಯಾಗಿಟ್ಟಿತು ಮತ್ತು ಪ್ರಕಟಿಸಿತು. ಯೇಸುವಿನ ಮಾನವತೆಯನ್ನು ನಾವು ಅಧ್ಯಯನ ಮಾಡುವಂತೆ ಮುಂದೆ ನಾವು ಶರೀರಿಕ ಪರದೆಯನ್ನು ಪರೀಕ್ಷಿಸುವೆವು.

---

ಟಿಪ್ಪಣೆಗಳು

[1]ವಿಮೋಚನಕಾಂಡ 3:13-15; 6:2, 3. [2]Miller Burrows, ed., *The Dead Sea Scrolls of St. Mark's, Monastery,* vol. 1, "The Isaiah Manuscript and the Habakkuk Commentary" (New Haven: The American Schools of Oriental Research, 1950),

Plate 22, line 20; Isaiah 28:16; etc. [3]NIV, RSV, KJV, NEB ಮತ್ತು JBಯಲ್ಲಿ ಯೋಹಾನ 8:58 ನೋಡಿರಿ. "ಸುವಾರ್ತೆಗಳಲ್ಲಿ ಇದು *[amen, amen]* ಯೇಸುವಿನಿಂದ ಮಾತ್ರ ಉಪಯೋಗಿಸಲ್ಪಟ್ಟಿದೆ. ಹಾಗೂ ಮಹತ್ವವುಳ್ಳ ಹೇಳಿಕೆಗಳಿಗೆ ಯಾವಾಗಲೂ ಪ್ರತ್ಯಯವಾಗಿ ಉಪಯೋಗಿಸಲ್ಪಟ್ಟಿದೆ. ಬಹುಶಃ ಇದು ಅವುಗಳನ್ನು ಗಂಭಿರವಾದವುಗಳಂತೆ, ಸತ್ಯವಾದವು ಗಳಂತೆ ಮತ್ತು ಮಹತ್ವದವುಗಳಂತೆ ಗುರುತಿಸುವದಕ್ಕಾಗಿರಬಹುದು. ಒಬ್ಬಾತನ ಸ್ವಂತ - ಮಾತುಗಳನ್ನು ಪರಿಚಯಿಸಲು ಆಮೆನ್ ಪದದ ಈ ಉಪಯೋಗವು ಯೇಸುವಿನ ಸ್ವಂತದ್ದಾಗಿ ಕಾಣುತ್ತದೆ. ಯಾವುದೇ ನಿಜವಾದ ಯೆಹೂದಿ ಸಮಾಂತರತೆಯು ಉಲ್ಲೇಖಿಸಲ್ಪಟ್ಟಿರುವದಿಲ್ಲ" (Leon Morris, *The Gospel According to John,* The New International Commentary on the New Testament, gen. ed. F. F. Bruce [Grand Rapids, Mich.: Wm. B. Eerdmans Publishing Co., 1971], 169). [4]E. Stauffer, *Jesus and His Story* (London: n.p. 1960), as quoted in Morris, 159. [5]ಯೋಹಾನ 8:21-34; New American Bible ಹೋಲಿಸು ಯೋಹಾನ 8:27, 28; New American Bible and NASB.

© 2009 Truth for Today